ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕೆರೆಗಳು

600(1309), ಡಾ॥ ಕೆ.ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಜಿಲ್ಲಾ ಪಂಚಾಯತ್ ಮತ್ತು ಇನ್ನಿತರೆ ಪಂಚಾಯತ್ ರಾಜ್ಯ ಸಂಸ್ಥೆಗಳ ಅಧೀನದಲ್ಲಿ ಬರುವ ಸಣ್ಣ ನೀರಾವರಿ ಆಧಾರಿತ ಕೆರೆ–ಕುಂಟೆಗಳ ಸಂಖ್ಯೆ ಎಷ್ಟು;

ಆ) ಈ ಕೆರೆ ಕುಂಟೆಗಳ ಪುನಃಶ್ಚೇತನಕ್ಕೆ ಸರಕಾರ ನಿರ್ದಿಷ್ಟ ಯೋಜನೆಗಳನ್ನು ರೂಪಿಸಿದೆಯೇ;

ಇ) ಹಾಗಿದ್ದಲ್ಲಿ, ಅದಕ್ಕಾಗಿ ಮೀಸಲಿಟ್ಟಿರುವ ಹಣ ಎಷ್ಟು;

ಈ) ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಜಾರಿಗೊಳಿಸಲು ಕೈಗೊಂಡಿರುವ ಕ್ರಮಗಳೇನು;

ಉ) ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ಸರ್ಕಾರ ಮೀಸಲಿಟ್ಟ ಹಣ ಎಷ್ಟು?

ಶ್ರೀ ಹೆಚ್.ಕೆ.ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಜಿ.ಪಂ. ವ್ಯಾಪ್ತಿಯ 40 ಹೆಕ್ಟೇರ್ಸ್ ಒಳಗಿನ 129 ಸಣ್ಣ ನೀರಾವರಿ ಕೆರೆಗಳಿರುತ್ತವೆ.

ಆ) ಕೆರೆ ಕುಂಟೆಗಳ ಪುನಃಶ್ಚೇತನಕ್ಕೆ ರೂಪಿಸಿರುವ ಯೋಜನೆಗಳ ವಿವರ ಈ ಕೆಳಕಂಡಂತಿದೆ.

1. ಜಿಲ್ಲಾ ಪಂಚಾಯಿತಿ ಕೆರೆಗಳ ಪೂರ್ವಸ್ಥಿತಿ ಮತ್ತು ಪುನಃಶ್ಚೇತನ–ವಿಶೇಷ ಅಭಿವೃದ್ಧಿ ಯೋಜನೆ
2. ಕೆರೆಗಳ ಪುನರುಜ್ಜೀವನ

3. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ 12000 ಕೆರೆಗಳ ಪುನಃಶ್ಚೇತನ ಕಾರ್ಯಕ್ರಮ

ಇ) ಪ್ರಸ್ತುತ ಸಾಲಿನಲ್ಲಿ ಆಯವ್ಯಯದಲ್ಲಿ ಸದರಿ ಕೆರೆ ಅಭಿವೃದ್ಧಿ ಕಾರ್ಯಕ್ರಮಕ್ಕೆ ಒದಗಿಸಿದ ಯೋಜನಾವಾರು ಅನುದಾನದ ವಿವರ ಕೆಳಕಂಡಂತಿದೆ.

(₹ ಲಕ್ಷಗಳಲ್ಲಿ)

ಯೋಜನೆ	ಒದಗಿಸಿದ ಅನುದಾನ
ಕೆರೆಗಳ ಪೂರ್ವಸ್ಥಿತಿ ಮತ್ತು ಪುನಃಶ್ಚೇತನ–ವಿಶೇಷ ಅಭಿವೃದ್ಧಿ ಯೋಜನೆ–2702	1700.00
4702–ಕೆರೆಗಳ ಪುನರುಜ್ಜೀವನ	500.00
ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕೆರೆ/ಕುಂಟೆ ಅಭಿವೃದ್ಧಿ	ಬೇಡಿಕೆ ಆಧರಿಸಿ

ಈ) ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗಾಗಿ

1. ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿ ಭಾಗಶಃ ಆವರಿಸಲ್ಪಟ್ಟ ಜನವಸತಿಗಳು, ಗುಣಮಟ್ಟ ಭಾದಿತ ಜನವಸತಿಗಳು, ಗ್ರಾಮೀಣ ಶಾಲೆ ಮತ್ತು ಅಂಗನವಾಡಿಗಳಿಗೆ ಶುದ್ಧ ಕುಡಿಯುವ ನೀರಿನ ಕಾಮಗಾರಿಗಳನ್ನು,
2. ತುರ್ತು ಕುಡಿಯುವ ನೀರು ಸರಬರಾಜು ಕಾರ್ಯಕ್ರಮದಲ್ಲಿ (ರಾಜ್ಯವಲಯ–ಎಂಎನ್‌ಪಿ–ಟಾಸ್ಕ್‌ಫೋರ್ಸ್) ಸಮಸ್ಯಾತ್ಮಕ

ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು,

3. SDRF/NDRF ಬರಪರಿಹಾರ ಯೋಜನೆಯಡಿ ತುರ್ತು ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಊ) ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರನ್ನೊದಗಿಸುವ ಸಲುವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ NRDWP ಕಾರ್ಯಕ್ರಮದಡಿ 2014–15ನೇ ಸಾಲಿನಲ್ಲಿ ₹ 3575.00 ಲಕ್ಷಗಳನ್ನು ಹಾಗೂ ಟಾಸ್ಕ್‌ಫೋರ್ಸ್ ಯೋಜನೆಯಡಿ ₹ 350.00 ಲಕ್ಷಗಳನ್ನು ಮೀಸಲಿಡಲಾಗಿದೆ.

ಸುವರ್ಣ ಗ್ರಾಮ ಯೋಜನೆ

601(1310): ಡಾ॥ ಕೆ.ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ಕಳೆದ ಮೂರು ವರ್ಷಗಳಿಂದ ಎಷ್ಟು ಗ್ರಾಮಗಳನ್ನು ಸುವರ್ಣ ಗ್ರಾಮ ಯೋಜನೆ ವ್ಯಾಪ್ತಿಗೆ ಅಳವಡಿಸಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ; (ವರ್ಷವಾರು, ಗ್ರಾಮವಾರು ವೆಚ್ಚದ ವಿವರ ನೀಡುವುದು)

ಆ) ನೆಲಮಂಗಲ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಕಾಮಗಾರಿಗಳನ್ನು ಸುವರ್ಣ ಗ್ರಾಮ ಯೋಜನೆಗೆ ಅಳವಡಿಸಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ; (ವರ್ಷಾವಾರು ಗ್ರಾಮವಾರು ವೆಚ್ಚದ ವಿವರ ನೀಡುವುದು)

ಇ) ಪ್ರಸಕ್ತ ಸಾಲಿನಲ್ಲಿ ಸುವರ್ಣ ಗ್ರಾಮ ಯೋಜನೆಗೆ ಹೊಸದಾಗಿ ಗ್ರಾಮಗಳನ್ನು ಒಳಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;